ಸಿ-72-(57)



**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್‌ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:**

**ವಿಷಯ:** 2020-21 ರ ಸಾಲಿನಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದ್ದು, ಇದರಲ್ಲಿ ದೊಡ್ಡ ಮಟ್ಟದ ಭ್ರಷ್ಟಾಚಾರವಾಗಿರುವ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆಗಳಾಗುತ್ತಿವೆ. ಹೊಸದಾಗಿ ಪ್ರಾರಂಭವಾಗುತ್ತಿರುವ ಬಹುತೇಕ ಕಾಲೇಜುಗಳನ್ನು ಅವಶ್ಯಕ ಮೂಲಭೂತ ಸೌಕರ್ಯ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಕೊರತೆಯನ್ನು ಹೊಂದಿದ್ದರೂ ಸಮರ್ಪಕವಾಗಿ ಪರಿಶೀಲನೆ ನಡೆಸದೆ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದನ್ನು ಗಮನಿಸಿದ್ದಲ್ಲಿ ತುಂಬಾ ದೊಡ್ಡ ಮಟ್ಟದ ಅವ್ಯವಹಾರ ನಡೆದಿರುವ ಬಗ್ಗೆ ಶಂಕೆ ವ್ಯಕ್ತವಾಗುತ್ತಿದೆ. ಆದುದರಿಂದ 2020-21 ರ ಸಾಲಿನಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳನ್ನು ಪ್ರಾರಂಭಿಸಲು ನೀಡಿರುವ ಅನುಮತಿಯ ಕುರಿತು ಸಮಗ್ರ ತನಿಖೆ ನಡೆಸುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

***

ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವು ದಿನಾಂಕ: 21.11.2019ರಂದು ಅಧಿಸೂಚನೆ ಹೊರಡಿಸಿ, 2020-2021ನೇ ಸಾಲಿಗೆ ಹೊಸ ಬಿ.ಎಸ್ಸಿ (ನರ್ಸಿಂಗ್) ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಿರುತ್ತದೆ. ಅದರನ್ವಯ ಹೊಸ ಸಂಯೋಜನೆಗಾಗಿ 101 ನರ್ಸಿಂಗ್ ಹಾಗೂ 70 ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಗಳಿಂದ ಅರ್ಜಿಗಳನ್ನು ಸ್ವೀಕರಿಸಿದ್ದು, ಈ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಲು ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಉಪಸಮಿತಿ ರಚಿಸಿರುತ್ತದೆ. ಈ ಉಪಸಮಿತಿಯು ವಿಶ್ವವಿದ್ಯಾಲಯ ಹಾಗೂ ಭಾರತೀಯ ಶುಶ್ರೂಷ ಪರಿಷತ್ತಿನ ಮಾರ್ಗಸೂಚಿಗಳನ್ನು ಅನುಸರಿಸಿ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಅರ್ಹವಾದ ಕಾಲೇಜುಗಳಿಗೆ ಸ್ಥಳೀಯ ತಪಾಸಣಾ ತಂಡಗಳನ್ನು ರಚಿಸಿರುತ್ತದೆ. ಈ ಸ್ಥಳೀಯ ತಪಾಸಣೆ ತಂಡದಲ್ಲಿ ಸೆನೆಟ್, ಅಕಾಡೆಮಿಕ್ ಕೌನ್ಸಿಲ್ ಹಾಗೂ ವಿಷಯ ತಜ್ಞರು ಒಳಗೊಂಡಿದ್ದು, ಈ ತಪಾಸಣಾ ತಂಡವು 60 ನರ್ಸಿಂಗ್ ಹಾಗೂ 52 ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಗಳ ಅರ್ಜಿಗಳನ್ನು ಶಿಫಾರಸ್ಸು ಮಾಡಿ, ಮುಂದಿನ ಪ್ರಕ್ರಿಯೆಗಾಗಿ ಸಲ್ಲಿಸಿ, ಅಗತ್ಯ ದಾಖಲಾತಿಗಳನ್ನು ಸಲ್ಲಿಸದೆ ಇರುವ ಸಂಸ್ಥೆಗಳ ಅರ್ಜಿಗಳನ್ನು 2020-2021ರ ಸಾಲಿಗೆ ತಿರಸ್ಕರಿಸಲಾಗಿರುತ್ತದೆ.

ತಪಾಸಣಾ ತಂಡವು ಶಿಫಾರಸ್ಸು ಮಾಡಿದ ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳ ತಪಾಸಣಾ ವರದಿಯನ್ನು ಡೀನ್ (ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸಸ್) ಪರಿಶೀಲಿಸಿರುತ್ತಾರೆ ಹಾಗೂ ಇವರ ವರದಿಯನ್ನು ದಿನಾಂಕ: 01.10.2020, 16.10.2020 ಮತ್ತು 02.11.2020 ರಂದು ನಡೆದ ಅಕಾಡೆಮಿಕ್ ಕೌನ್ಸಿಲ್/ಕಮಿಟಿ ಆಫ್ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಮಂಡಿಸಲಾಗಿತ್ತು. ಈ ಸಭೆಯ ನಿರ್ಣಯವನ್ನು 152, 153 ಹಾಗೂ 154ರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿತ್ತು. 153ನೇ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಸದರಿ ಕಾಲೇಜುಗಳ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಲು ಪ್ರತಿನಿಖಾಯಕ್ಕೆ ಒಂದರಂತೆ ಮೂವರು

ಸಿಂಡಿಕೇಟ್ ಸದಸ್ಯರುಗಳ ತಂಡವನ್ನು ಪ್ರತ್ಯೇಕವಾಗಿ ರಚಿಸಲಾಗಿತ್ತು ಹಾಗೂ ಈ ತಂಡಗಳು ಸದರಿ ಕಾಲೇಜುಗಳ ದಾಖಲಾತಿಗಳನ್ನು ಪರಿಶೀಲಿಸಿ ಅನುಮೋದನೆಗೆ ಶಿಫಾರಸ್ಸು ಮಾಡಿರುತ್ತಾರೆ. ತದನಂತರ ಕೆಲವು ಕಾಲೇಜುಗಳನ್ನು ಸಿಂಡಿಕೇಟ್ ಸದಸ್ಯರು ಪುನ: ಖುದ್ದಾಗಿ ತಪಾಸಣೆ ಮಾಡಿ ವರದಿ ಸಲ್ಲಿಸಿರುತ್ತಾರೆ.

ಈ ಮೇಲಿನಂತೆ ವಿಶ್ವವಿದ್ಯಾಲಯದ ನಿಯಮಗಳನ್ವಯ ಎಲ್ಲಾ ಪ್ರಕ್ರಿಯೆಗಳನ್ನು ಪಾಲಿಸಿ ಹಲವಾರು ಹಂತಗಳಲ್ಲಿ ಪರಿಶೀಲಿಸಿ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿದ ನಂತರ ಅರ್ಹ ಕಾಲೇಜುಗಳ ಪ್ರಸ್ತಾವನೆಗಳನ್ನು ಸರ್ಕಾರಕ್ಕ ಸಲ್ಲಿಸಿರುತ್ತಾರೆ.

ಈ ರೀತಿ ಸ್ವೀಕೃತವಾದ ಪ್ರಸ್ತಾವನೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಉನ್ನತಾಧಿಕಾರ ಸಮಿತಿಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಉನ್ನತಾಧಿಕಾರ ಸಮಿತಿ ಸಭೆಯು ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸದರಿ ಸಂಸ್ಥೆಯನ್ನು ನಡೆಸುತ್ತಿರುವ ಟ್ರಸ್ಟ್, ಸಂಸ್ಥೆಯು ನಡೆಸುತ್ತಿರುವ ಇತರೆ ಕೋರ್ಸುಗಳ ವಿವರ, ಜಮೀನು/ಕಟ್ಟಡದ ವಿವರ, ಕಟ್ಟಡ ನಕ್ಷೆ, ಬೋಧಕ ಕೊಠಡಿಗಳು, ಬೋಧಕ ಸಿಬ್ಬಂದಿಗಳ ಲಭ್ಯತೆ, ಕ್ಲಿನಿಕಲ್ ಸೌಲಭ್ಯ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಮಾಣ ಪತ್ರ, ಜಿಲ್ಲಾ ಆರೋಗ್ಯಾಧಿಕಾರಿಗಳಿಂದ ಪಡೆದಿರುವ ಪ್ರಮಾಣ ಪತ್ರ ಅಥವಾ ಎಂ.ಓ.ಯು. ಉಪಕರಣಗಳು, ಗ್ರಂಥಾಲಯ ಮಾಹಿತಿ, ಐಪಿಡಿ/ಓಪಿಡಿ, ಶಸ್ತ್ರಚಿಕಿತ್ಸೆ, ಮತ್ತಿತರೆ ವಿವರಗಳು, ಆರ್ಥಿಕ ಸ್ಥಿರತೆ, 3 ವರ್ಷಗಳ ಅಡಿಟ್ ವರದಿ, ಕಳೆ 03 ವರ್ಷಗಳ ತೇರ್ಗಡೆ ವಿವರ ಮುಂತಾದ ಎಲ್ಲಾ ವಿವರಗಳನ್ನುಕೂಲಂಕಷವಾಗಿ ಪರಿಶೀಲಿಸಿದ ಸಮಿತಿಯು ಮೇಲ್ಕಂಡಂತೆ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ 47 ನರ್ಸಿಂಗ್ ಮತ್ತು 45 ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಗಳಿಗೆ ಮಂಜೂರಾತಿ ನೀಡಲು ಶಿಫಾರಸ್ಸು ಮಾಡಲಾಗಿದೆ. ಮೇಲ್ಕಾಣಿಸಿದ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿಲ್ಲದ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗಿರುತ್ತದೆ.

(ಡಾ|| ಕೆ.ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ:ಎಂಇಡಿ 18 ಆರ್‌ಜಿಯು 2021